* ತಾಲ್ಲೂಕು ಆಸ್ಪತ್ರೆಯಲ್ಲಿನ ಖಾಲಿ ಹುದ್ದೆಗಳ ಎದುರು ನೇಮಕಗೊಂಡಿರುವ ಹುದ್ದೆಗಳು ಒಳಗೊಂಡಿರುತ್ತದೆ.

(ಈ) ಸದರೀ ಏಜೆನ್ಸಿಗಳಿಗೆ ಕಾರ್ಮಿಕ ಕಾಯ್ದೆ ಅನ್ವಯ ವೇತನ ನೀಡಲು ಸೂಚಿಸಿದ ಪ್ರಕಾರ ಏಜೆನ್ಸಿಯವರು ಅವರ ಬ್ಯಾಂಕ್ ಖಾತೆಗೆ ನೇರವಾಗಿ (ಕೋರ್ ಬ್ಯಾಂಕ್ ಮುಖಾಂತರ) ವೇತನ ನೀಡುತ್ತಿದ್ದಾರೆ. ಸದರಿ ಸಿಬ್ಬಂದಿ ನೇಮಕಾತಿ ಹೊರಗುತ್ತಿಗೆ ಆಧಾರವಾಗಿರುವುದರಿಂದ ಅವರಿಗೆ ನೇರವಾಗಿ ವೇತನ ಸಂದಾಯ ಮಾಡಲು ನಿಯಮಾವಳಿಗಳಲ್ಲಿ ಅವಕಾಶವಿರುವುದಿಲ್ಲ.

(ಉ) ಅಬ್ಜೆಕ್ಟ್ ಟೆಕ್ನಾಲಜಿ/ಮಾತಾ ಟೆಕ್ನಾಲಜಿ ಇವರ ಅವಧಿ 5.9.2009 ರಿಂದ ಪ್ರಾರಂಭವಾಗಿ 31.3.2011ಕ್ಕೆ ಮುಕ್ತಾಗೊಂಡಿರುತ್ತದೆ. ಹೊಸದಾಗಿ ಟೆಂಡರ್ ಕರೆದಿರುವುದಕ್ಕೆ ರಾಜ್ಯ ಉಚ್ಚ ನ್ಯಾಯಾಲಯದಿಂದ 1.4.2011 ರಂದು ತಡೆಯಾಜ್ಞೆ ಬಂದಿರುವುದರಿಂದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿ.ಪಂ. ಬೆಳಗಾವಿ ಇವರ ಅನುಮೋದನೆಯೊಂದಿಗೆ ಅವರ ಸೇವೆಯನ್ನು ತಾತ್ಕಾಲಿಕವಾಗಿ ಮುಂದಿನ ಆದೇಶದ ವರೆಗೆ ಮುಂದುವರೆಯಿಸಲಾಗಿದೆ. ಸಾಯಿ ಟೆಕ್ನಾಲಜಿ ಇವರ ಸೇವೆಯು 1.4.2011 ರಿಂದ ಪ್ರಾರಂಭವಾಗಿ ದಿ: 31.3.2012ಕ್ಕೆ ಮುಕ್ತಾಯಗೊಳ್ಳುವುದು.

561 (1000) ಶ್ರೀ ಪ್ರತಾಪಗೌಡ ಪಾಟೀಲ್ (ಮಸ್ಕಿ):– ಮಾನ್ಯ ಮುಖ್ಯಮಂತ್ರಿಯವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ರಾಯಚೂರು ಜಿಲ್ಲಾ ಮಸ್ಕಿ ಪಟ್ಟಣದ ಆಸ್ಪತ್ರೆಯನ್ನು ಮೇಲ್ದರ್ಜೆಗೆ ಏರಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ; ಹಾಗಿದ್ದಲ್ಲಿ, ಯಾವಾಗ ಮೇಲ್ದರ್ಜೆಗೇರಿಸಲಾಗುವುದು ?

ಶ್ರೀ ಡಿ.ವಿ. ಸದಾನಂದಗೌಡ (ಮಾನ್ಯ ಮುಖ್ಯಮಂತ್ರಿಗಳು)

(ಅ) ಮಾರ್ಗಸೂಚಿಗಳ ಪ್ರಕಾರ 1,20,000 ಜನಸಂಖ್ಯೆಗೆ ಒಂದರಂತೆ ಸಮೂದಾಯ ಆರೋಗ್ಯ ಕೇಂದ್ರವನ್ನು ಮಂಜೂರು ಮಾಡಲು ಅವಕಾಶವಿದ್ದು ಲಿಂಗಸುಗೂರು ತಾಲ್ಲೂಕಿನ ಗ್ರಾಮೀಣ ಜನಸಂಖ್ಯೆ 2,47,326 ಆಗಿದ್ದು, 2 ಸಮೂದಾಯ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡಲು ಅವಕಾಶವಿದೆ. ಆದರೆ, ಸದರಿ ತಾಲ್ಲೂಕಿನಲ್ಲಿ ಈಗಾಗಲೇ 3

ಸಮೂದಾಯ ಆರೋಗ್ಯ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ. ಆದುದರಿಂದ, ಮಸ್ಕಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆಗೇರಿಸಲು ಅವಕಾಶ ಇರುವುದಿಲ್ಲ.

ಮುಂದುವರೆದು, ರಾಜ್ಯದಲ್ಲಿ ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸುವುದು ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಸಮೂದಾಯ ಆರೋಗ್ಯ ಕೇಂದ್ರಗಳು ಮತ್ತು ಸಾರ್ವಜನಿಕ ಆಸ್ಪತ್ರೆ ಇತ್ಯಾದಿಯ ಮೇಲ್ದರ್ಜೆಗೇರಿಸುವಿಕೆಯನ್ನು ಒಂದು ನೀತಿ ನಿರ್ಣಯವಾಗಿ ದಿನಾಂಕ: 11–1–2011 ರಿಂದ ಮೂರು ವರ್ಷಗಳ ಅವಧಿಗೆ ಸರ್ಕಾರವು ತಡೆಹಿಡಿದಿದೆ.

ರೈತರ ಜಮೀನಿನ ಸರ್ವೆ ನಕ್ಷೆ ವಿಳಂಬವಾಗುತ್ತಿರುವುದು

562 (1001) ಶ್ರೀ ಪ್ರತಾಪಗೌಡ ಪಾಟೀಲ್ (ಮಸ್ಕಿ):– ಮಾನ್ಯ ಮುಖ್ಯಮಂತ್ರಿಯವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ರೈತರ ಜಮೀನಿನ ಸರ್ವೆ ನಕ್ಷೆ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

(ಆ) ಹಾಗಿದ್ದಲ್ಲಿ, ಸರಿಪಡಿಸುವುದಕ್ಕೆ ಯಾವ ಕ್ರಮ ಕೈಗೊಂಡಿದ್ದೀರಿ ?

ಶ್ರೀ ಡಿ.ವಿ. ಸದಾನಂದಗೌಡ: (ಮಾನ್ಯ ಮುಖ್ಯಮಂತ್ರಿಗಳು)

(ಅ) ಬಂದಿದೆ.

(ಆ) ರಾಯಚೂರು ಜಿಲ್ಲೆಯಲ್ಲಿ 11ಇ ನಕ್ಷೆಗಾಗಿ ಸ್ವೀಕೃತಿಯಾಗುವ ಅರ್ಜಿಗಳಲ್ಲಿ ಶೇಕಡ 70 ಕ್ಕಿಂತ ಅರ್ಜಿಗಳ ಪೈಕಿ ಪಹಣಿ ಅಥಾ ಪಹಣಿಯಲ್ಲಿ ವಿಸ್ತೀರ್ಣ ತಿದ್ದುಪಡಿಯಾಗಬೇಕಾದ ಪ್ರಕರಣಗಳಾಗಿರುತ್ತವೆ. ಈ ಪ್ರಕರಣಗಳಲ್ಲಿ ಮೊದಲಿಗೆ ಪಹಣಿ ತಿದ್ದುಪಡಿ ಪ್ರಕ್ರಿಯೆ ಪೂರ್ಣಗೊಳಿಸಿ ಹಾಗೂ ಪೋಡಿ ಮಾಡಿದ ನಂತರ 11ಇ ನಕ್ಷೆ ವಿತರಿಸಬೇಕಾಗಿರುತ್ತದೆ. ಕಾರಣ ನಕ್ಷೆ ವಿತರಣೆಯಲ್ಲಿ ವಿಳಂಬವಾಗಿರುತ್ತದೆ.

ತ್ವರಿತವಾಗಿ ನಕ್ಷೆಗಳನ್ನು ವಿತರಿಸುವ ಸಂಬಂಧ ಸಭೆಗಳನ್ನು ನಡೆಸಿ ಅಧೀನ ಸಿಬ್ಬಂದಿಗೆ ಮಾರ್ಗದರ್ಶನ ಹಾಗೂ ಸೂಚನೆಗಳನ್ನು ನೀಡಲಾಗಿರುತ್ತದೆ ಹಾಗೂ ಉದ್ದೇಶಪೂರ್ವಕವಾಗಿ ವಿಳಂಬ ಮಾಡುವ ಸಿಬ್ಬಂದಿಯ ವಿರುದ್ಧ ಶಿಸ್ತು ಕ್ರಮ ಜರುಗಿಸುವ